ಮತ್ತೆ ಬಿಚ್ಕೋದೆ.' ಅಂದಳು ತಂಗಿಗೆ. ಬಿಳಿ ಸಂಪಿಗೆಯ ಎಸಳಿನಂತಹ ಮಕ್ಕಳು. ಇನ್ನೊಂದು ನಾಕ್ಕೈದು ವರ್ಷಕ್ಕೆ ಅಕ್ಕಿಕಾಳು ಹಾಕಿಸಿಕೊಂಡು ಗಂಡನ ಮನೆ ಸೇರುವವು. ಯಾಕೋ ತಮ್ಮ ವಯಸ್ಸಿಗಿಂತಲೂ ಭಾಳ ದೊಡ್ಡೋರಾಗಿಬಿಟ್ಟವೆ ಅನ್ನಿಸಿತು ಶಂಕರಿಗೆ. 'ದಡಾ ದಡಾ ಕಟ್ಟರಿ ಯವ್ವ, ನಮ್ಮದರ ಎಷ್ಟು? 11ಕ್ಕ ಬರಾಕ ಗಾಡಿಯವನಿಗೆ ಹೇಳೀನಿ' ಅಂದರು ಶಿವರಾಯ ಮಾಸ್ತರು. ಶಂಕರಿ ಅಪ್ಪನ ಮುಖ ನೋಡಿದಳು. ಮಾಸ್ತರು ಬೆವರು ಒರೆಸಿಕೊಳ್ಳೋ ಚೌಕದಲ್ಲಿ ಕಣ್ಣೀರು ಒರೆಸಿಕೊಂಡಿದ್ದು ಅವಳಿಗೆ ಕಂಡಿತ್ತು. ಅಪ್ಪ, ನನಗೆ ಮುಖ ಕೊಡ್ತಿಲ್ಲ ಅನ್ನೋ ಬೇನೆ, ಅತ್ತರೆ ಕರೆದರೆ ಈ ನಗರದ ಮರ್ಯಾದಸ್ಥರ ಬೀದಿಯಲ್ಲಿ ಯಾರಿಗೆಲ್ಲ ಕೇಳಿ, ಏನೆಲ್ಲ ಅನುವಾದವಾಗಿ ಯಾರ ಮನೆ ಚಹಾಕ್ಕೆ ನಂಜಿಕೊಳ್ಳುವ ವಸ್ತುಗಳಾಗಿಬಿಡ್ತಿವೋ ಅನ್ನೋ ಭಯ.

ಪ್ರದೀಪ ಇಷ್ಟು ನಿಷ್ಠುರಕ್ಕೆ ಹೋಗಬಹುದು ಅನಸಿರಲಿಲ್ಲ ಶಂಕರಿಗೆ. ಎರಡು ದಿನದ ಹಿಂದೆ ಬೆಳಬೆಳಿಗ್ಗೆ ಗಂಡ ಹೆಂಡತಿ ಇಬ್ಬರೂ ತಮ್ಮ ಖೋಲಿಯಿಂದ ಏನೇನೋ ತುಂಬಿಕೊಂಡ ಬ್ಯಾಗು ತಗಲಿಸಿಕೊಂಡು, 'ಇಂಥಲ್ಲಿ ಹೀಗೆ ಹೋಗ್ಬರ್ತೀವಿ' ಅಂತ ಒಂದು ಬ್ರ ಅಂತ ನುಡಿಯದೇ ದಪದಪ ಹೆಜ್ಜೆ ಹಾಕಿ, ಕಾರು ಸ್ಟಾರ್ಟು ಮಾಡಿಕೊಂಡು ಹೋಗಿಯಾಗಿತ್ತು. ಶಂಕರಿ ರವೆ ಹುರಿಯುತ್ತಿದ್ದವಳು ಗಾಬರಿಯಿಂದ ಹೊರಗೋಡಿ ಬಂದಿದ್ದಳು. ಅಪ್ಪ, ಬಲಗಾಲು ಮೀಟುತ್ತ ಅಂಗಳವೆಂಬೋ ರಸ್ತೆಯಲ್ಲಿ ಕಸ ಉಡುಗುತ್ತಿದ್ದ. ಪ್ರದೀಪನಿಗೆ, ಅವನ ಹೆಂಡತಿಗೆ ಅಪ್ಪನನ್ನ ಹಾಗೆ ಸುಮ್ಮನೆ ದಾಟಿ ಹೋಗಲು ಹೇಗಾದರೂ ಸಾಧ್ಯವಾಯಿತೋ? ಒಳಗೆ ಮಧು ಕೈ ಬಡಿಸಿ ಏನೋ ಧಡಾಲನೆ ಬಿತ್ತು. 'ಕಾಜು ಒಡಿತೇನವ್ವಾ? ಅಪಸಕುನ' ಅಂತ ಅವ್ವ ಮಲಗಿದ್ದಲ್ಲೇ ಕನಲಿದಳು. 'ಎಂಥ ಸಕುನ ನಿಂದು, ಇನ್ನ ಏನಾರ ಆಗಾಕುಳದಾತ?' ಅಪ್ಪ ತೀಕ್ಷ್ಣವಾಗಿ ಕೇಳಿದ್ದ. ಅಪ್ಪನ ದನಿ ಒದ್ದೆಯಾಗಿ ಹೋಗಿದೆ.

